

ಗರ ಗರನೆ ತಿರುಗುವ ಸುಂಟರಗಾಳಿ ಎಳೆ ಮಾವಿನ ತೊಟ್ಟನ್ನು ಕತ್ತನ್ನು ಮುರಿದ ಹಾಗೆ ಪಟಕ್ಕನೆ ಮುರಿದು ನೆಲಕ್ಕೆ ಎಸೆಯುತ್ತವೆ. ಕೆಲವೊಮ್ಮೆ ರೇವತಿ, ಅಶ್ವಿನಿ, ಭರಣಿ, ರೋಹಿಣಿ, ಮೃಗಶಿರಗಳೆಂಬ ಹೆಣ್ಣಿನ ಸುಂದರ ಹೆಸರು ಹೊತ್ತ ಮಳೆಗಳು ಕಾಳಿ ದುರ್ಗಿಯರಾಗಿ ಎಬ್ಬಿಸುವ ದಾಂಧಲೆಗಳನ್ನು ಊಹಿಸಲಸಾಧ್ಯ. ನಿಂತ ನಿಲುವಿನಲ್ಲೆ ಮರಕ್ಕೆ ಸಿಡಿಲು ಒಗೆದು ಗಹಗಹಿಸಿ ನಗುತ್ತವೆ. ತಾಯಿ ಮಕ್ಕಳಿದ್ದ ಗುಡಿಸಲಿಗೆ ಬೆಂಕಿ ಬಿದ್ದು ಸುಟ್ಟು ಸಮಾಧಿಯಾದಂತಾಗುತ್ತಿದ್ದವು. ಸಿಡಿಲು ಬಿದ್ದ ಮರಗಳನ್ನು ನೋಡಿದ ನಮ್ಮ ಎದೆಗೆ ಸಿಡಿಲು ಬಡಿದಂತಾಗುತ್ತಿತ್ತು. ಎಷ್ಟು ಕಷ್ಟಪಟ್ಟು ಈ ಮರಗಳನ್ನು ಹಿರಿಯರು ಬೆಳೆಸಿದ್ದರು. ಗಿಡಗಳಾಗಿದ್ದರೆ ನಾವೂನು ನೀರು ಹೊತ್ತು ಮುಳ್ಳು ಕಟ್ಟಿ ಬೆಳೆಸಿರುತ್ತಿದ್ದೆವು. ಎಲ್ಲ ಶ್ರಮ ಕಣ್ಣ ಕ್ಷಣಾರ್ಧದಲ್ಲಿ ಧಗಧಗನೆ ಉರಿದು ಬೂದಿಯಾಗುತ್ತಿತ್ತು. ಕುಂಬಾರರ ಮಡಕೆಯಷ್ಟೆ ಅಲ್ಲ ರೈತರ ಬದುಕಿಗೂ ನಿಮಿಷವಷ್ಟೆ ಎಂಬ ಭಾವ ಸುಳಿದು ಎದೆಗೆ ಬೆಂಕಿ ತಾಕುತ್ತಿತ್ತು.

ಅಶ್ವಿನಿ ಮತ್ತು ಭರಣಿ ಮಳೆಗಳು ಆಲಿಕಲ್ಲಿನ ಹೊಡೆತದ ದಿಗಿಲು ಹುಟ್ಟಿಸುತ್ತವೆ. ಕೋಮಲ ಸಿಪ್ಪೆಯ ಹೊದಿಕೆಯ ರಸಪುರಿ, ಬಾದಾಮಿ ಕಾಯಿಗಳ ಮೈಮೇಲೆ ರಪ್ಪ ರಪ್ಪನೆ ಆಲಿ ಕಲ್ಲು ಬಿದ್ದುಹಸಿರು ಕಾಯಿ ಒಡೆದು ಒಳಗಿನ ಬೆಳ್ಳನ್ನ ತಿರುಳು ರೈತಾಪಿ ಮಕ್ಕಳ ಎದೆಯೊಳಗೆ ವೇದನೆ ಹುಟ್ಟಿಸುತ್ತವೆ. ಆಲಿಕಲ್ಲಿನ ಹೊಡೆತಕ್ಕೆ ಸಿಕ್ಕ ಕಾಯಿಗಳು ಯುದ್ಧದೊಳಗೆ ಖಡ್ಗ, ಗದೆ, ಚಕ್ರಗಳಿಗೆ ಸಿಲುಕಿ ದೇಹ, ತಲೆ ಹೋಳಾಗಿ, ಅಯ್ಯೋ ಎಂದು ಒಡೆದು ಹಸಿರು, ಬಿಳಿ ಬಣ್ಣ ಕೆಮ್ಮಣ್ಣಿನೊಳಗೆ ಬೀಳುತ್ತವೆ. ಒದೆ ತಿಂದು ಬದುಕಿದ ಕಾಯಿಗಳು ವಾರೊಪ್ಪತ್ತು ಕಳೆದಂತೆ ಏಟು ಬಿದ್ದ ಜಾಗದಲ್ಲಿ ಸಿಡುಬಿನ ಕಲೆಯಾದಂತೆ ಕಪ್ಪಗಾಗಿ ನೆಲಕ್ಕೆ ಉದುರುತ್ತವೆ. ಮಳೆ, ಗಾಳಿಗೆ ಸಿಕ್ಕಿ ನೆಲಕ್ಕೆ ಉದುರಿದ ಕಾಯಿಗಳನ್ನು ನೋಡಿ ಅನೇಕ ಸಾರಿ ಅತ್ತಿದ್ದೇವೆ. ಮರಗಳನ್ನು ಸಾಬರಿಗೆ ಮಾರಿದ್ದರೂ ದುಃಖ ನಿಲ್ಲುತ್ತಿರಲಿಲ್ಲ. ಪಾಪ ಸಾಬರೇನು ಮಾಡುತ್ತಾರೆ? ಬಾಕಿ ಉಳಿಸಿಕೊಂಡ ಹಣ ಕೊಡುತ್ತಾರೊ ಇಲ್ಲವೊ ಎನ್ನಿಸುತ್ತಿತ್ತು. ಅನೇಕ ಸಾರಿ ಹಾನಿಯಾದ ಬೆಳೆಗೆ ರೈತರು ಸಾಬರಿಂದ ದುಡ್ಡು ಕೊಡಿರೆಂದು ಕೇಳುತ್ತಿರಲಿಲ್ಲ. ಕೆಲವೊಮ್ಮೆ ಇನ್ನೊಂದು ಹದಿನೈದು ದಿನ ಕಳೆದರೆ ಕಾಯಿ ಇಳಿಸಬಹುದಿತ್ತೆಂದು ಸಾಬರು ಎದೆ ಬಡಿದುಕೊಳ್ಳುತ್ತಾರೆ. ಆದರೂ ಉದುರಿದ ಕಾಯಿಗಳು ಮಂಡಿ ಸೇರಿ ಉಪ್ಪಿನ ಕಾಯಿಗೆ ಸೇಲಾಗುತ್ತವೆ. ಅನೇಕ ಕಾಯಿಗಳಿಗೆ ಮದುವೆಗೆ ಉಪ್ಪಿನ ಕಾಯಾಗುವ ಅದೃಷ್ಟ ಸಿಗುತ್ತದೆ. ಉಪ್ಪು ಖಾರದ ನೀರಿನ ಜೊತೆ ಬೆರೆತು ಎಲೆ